

# ಬುದ್ಧಿವಂತನ ಲಕ್ಷಣ ಜಾಣಹಲ್ಲು

ಡಾ.ಎ.ಜಿ. ಹರಿಕಿರಣ್

ವಿಸ್ಡಮ್ ಟೂತ್ ಅರ್ಥಾತ್ ಜಾಣ ಹಲ್ಲೆಂದರೇನು?

ನಮಗೆ ಬುದ್ಧಿ ಬಂದಾದ ಮೇಲೆ ಬರುವ ಹಲ್ಲಿಗೆ ವಿಸ್ಡಮ್ ಟೂತ್ ಅಂತಾರಾ ಡಾಕ್ಟ್ರೇ? ಎಂದು ರೋಗಿಯೊಬ್ಬರ ಪ್ರಶ್ನೆ, ಹೌದೆನ್ನಬಹುದು ಏಕೆಂದರೆ ಬಾಯಿಯಲ್ಲಿ ಮೂಡುವ ಕೊನೆಯ ಹಲ್ಲುಗಳಿವು, 17ರಿಂದ 25 ವಯಸ್ಸಿನ ಮಧ್ಯೆ ಇವು ಮೂಡುತ್ತವೆ. ಈ ಅವಧಿಯನ್ನು ಬುದ್ಧಿ ಮೂಡುವ ವಯಸ್ಸೆಂದೇ ಪರಿಗಣಿಸಲಾಗುತ್ತದೆ. ತಿಳುವಳಿಕೆ ಮೂಡುವ, ಜಗತ್ತೆಲ್ಲಾ ಸುಂದರವೆನಿಸುವ, ತಾನು ಬಹಳ ಬುದ್ಧಿವಂತನೆಂದು ತಿಳಿದುಕೊಳ್ಳುವ ವಯಸ್ಸಿದು. ಅದಕ್ಕೆಂದೇ ಇದನ್ನು ಜಾಣ ಹಲ್ಲೆಂದು ಎನ್ನುತ್ತಾರೆನ್ನಬಹುದು. ಈ ಹಲ್ಲುಗಳು ಆರೋಗ್ಯಕರವಾಗಿದ್ದು, ಸರಿಯಾದ ಸ್ಥಳದಲ್ಲಿ ಹೊರ ಬಂದರೆ ಯಾವುದೇ ತೊಂದರೆ ಇರುವುದಿಲ್ಲ. ಆದರೆ ಬಹಳಷ್ಟು ಜನರಿಗೆ ಇದು ಸರಿಯಾದ ಸ್ಥಳದಲ್ಲಿ ಮೂಡದೆ ಅದನ್ನು ಕೀಳಬೇಕಾಗುತ್ತದೆ.

ಹಲ್ಲು ಹೊರ ಬರುವಾಗ ಆಗುವ ತೊಂದರೆಗಳು..

ಹಿಂದೆ ತಿನ್ನುವ ಆಹಾರ ಗಟ್ಟಿಯಾಗಿದ್ದು ಹಲ್ಲುಗಳ ಉಪಯೋಗ ಸಾಕಷ್ಟು ಆಗುತ್ತಿದ್ದು ದವಡೆಯ ಆಕಾರ ದೊಡ್ಡದಾಗಿದ್ದು ಹರಯದಲ್ಲಿ ತಡವಾಗಿ ಬರುವ ಜಾಣಹಲ್ಲುಗಳಿಗೂ ಸ್ಥಳವಿರುತ್ತಿತ್ತು, ಆದರೆ ಈಗ ತಿನ್ನುವ ಆಹಾರ ಬಹಳ ಮೃದುವಾಗಿದ್ದು ಹಲ್ಲುಗಳ ಸವೆತ ಕಡಿಮೆಯಾಗಿ ದವಡೆಯ ಆಕಾರ ಚಿಕ್ಕದಾಗಿ, ತಡವಾಗಿ ಬರುವ ಜಾಣ ಹಲ್ಲುಗಳಿಗೆ ಬೇಕಾಗುವಷ್ಟು ಸ್ಥಳವಿರುವುದಿಲ್ಲ. ಆಧುನಿಕ ಯುಗದಲ್ಲಿ ಸೊಟ್ಟಾಗಿರುವ ಉಬ್ಬಿರುವ ಹಲ್ಲುಗಳನ್ನು ಸರಿಪಡಿಸುವ ಹಂತದಲ್ಲಿ ಹಲ್ಲುಗಳು ಪೂರ್ಣ ಸ್ಥಳವನ್ನು ಆಕ್ರಮಿಸಿಕೊಳ್ಳುತ್ತವೆ. ಹೀಗಾಗಿ ಕೊನೆಯಲ್ಲಿ ಬರುವ ಹಲ್ಲುಗಳಿಗೆ ಸ್ಥಳದ ಅಭಾವ ಸಮಸ್ಯೆಗೆ ಕಾರಣವಾಗುತ್ತದೆ.



ಜಾಣಹಲ್ಲು ಬಂದಾಗ ಆಗುವ ತೊಂದರೆಯ ಕಾರಣ..

ದವಡೆಯಲ್ಲಿ ಸಾಕಷ್ಟು ಸ್ಥಳ ಲಭ್ಯವಿಲ್ಲದಿದ್ದಾಗ ಈ ಜಾಣಹಲ್ಲು ಹೊರ ಬರುವಾಗ ವಸಡು, ಮೂಳೆ ಅಥವಾ ಮತ್ತೊಂದು ಹಲ್ಲು ತಡೆ ಹಾಕುತ್ತದೆ. ಕೆಲವು ಬಾರಿ ಹಲ್ಲಿನ ಒಂದು ಭಾಗ ಹೊರ ಬಂದಿರುತ್ತದೆ, ಅನೇಕ ಬಾರಿ ಪೂರ್ಣವಾಗಿ ಹೊರ ಬರಲಾಗುವುದಿಲ್ಲ. ಆಗ ನೋವು ಮತ್ತು ಸೋಂಕು ಉಂಟಾಗುತ್ತದೆ. ಪಕ್ಕದಲ್ಲಿರುವ ಹಲ್ಲು ಅಥವಾ ಅದರ ಬೇರಿಗೆ ಹಾನಿಯುಂಟಾಗುತ್ತದೆ. ಹಲ್ಲು ಪೂರ್ಣವಾಗಿ ವಸಡಿನಿಂದ ಹೊರ ಬರಲಾಗದಿದ್ದಾಗ ಅದು ಹಲ್ಲಿನ ಮೇಲ್ಭಾಗದಲ್ಲೂ ಆವರಿಸಿ ಬಿಡುತ್ತದೆ. ಆಗ ತಿನ್ನಲು, ಹಲ್ಲನ್ನು ಉಜ್ಜಲು ಏನೂ ಸಾಧ್ಯವಾಗುವುದಿಲ್ಲ, ಆಗ ನೀವೆಷ್ಟೇ ಮುಂಜಾಗರೂಕರಾಗಿದ್ದರೂ ಸಹಾ ಅಲ್ಲಿ ಸೋಂಕುಂಟಾಗಿ ಕೀವು ಸೇರಿಕೊಂಡು ಸಾಕಷ್ಟು ಹಾನಿಕಾರಕ ಪರಿಣಾಮಗಳಾಗಬಹುದು. ಬಹಳ ಸಾಮಾನ್ಯವಾಗಿ ಹದಿಹರಯದವರು ಎದುರಿಸುವ ಸಮಸ್ಯೆ ಇದು.

## ಲಕ್ಷಣಗಳು

- ಹಲ್ಲು ಬರುವ ಜಾಗದಲ್ಲಿ ವಸಡಿನಲ್ಲಿ ಊತ ಉಂಟಾಗಿ ನೋವು ಬರುತ್ತದೆ.
- ಬಾಯಿ ತೆರೆಯಲು ತೊಂದರೆಯಾಗುತ್ತದೆ.
- ಬಾಯಿಯಿಂದ ದುರ್ವಾಸನೆ ಬರುತ್ತದೆ ಮತ್ತು ಬಾಯಿ ಕಹಿಯೆನಿಸುತ್ತದೆ.
- ಪೂರ್ಣ ದವಡೆಯಲ್ಲಿ ನೋವು ಆವರಿಸಿ ಕತ್ತಿನ ತನಕ ನೋವಾಗುತ್ತದೆ.

ಸರಿಯಾದ ಸಮಯದಲ್ಲಿ ಚಿಕಿತ್ಸೆ ಪಡೆಯದಿದ್ದಲ್ಲಿ ಸೋಂಕು ತೀವ್ರವಾಗುತ್ತದೆ. ತೊಂದರೆಯಿಲ್ಲದಿದ್ದಾಗಲೂ ಈ ಹಲ್ಲನ್ನು ಕೀಳಿಸಬೇಕೆ?

ತೊಂದರೆಯೆಂದಾಗ ಬರಿಯ ನೋವೆಂದು ಎಲ್ಲರ ಭಾವನೆ. ಅನೇಕ ಬಾರಿ ಕೊನೆಯ ಹಂತದವರೆಗೂ ನೋವು ತಿಳಿಯುವುದಿಲ್ಲ, ಆದ್ದರಿಂದ ನಿಯಮಿತವಾಗಿ ವೈದ್ಯರ ಹತ್ತಿರ ಪರಿಶೀಲನೆ ಮಾಡಿಸಿಕೊಂಡಾಗ ಲಕ್ಷಣಗಳು ತಿಳಿಯುತ್ತವೆ. ಅಗತ್ಯವಿದ್ದರೆ ಕೀಳಿಸಬೇಕಾಗಬಹುದು, ಅದನ್ನು ದಂತ ವೈದ್ಯರು ನಿರ್ಧರಿಸುತ್ತಾರೆ. ಜಾಣ ಹಲ್ಲುಗಳನ್ನು ಕೀಳಿಸಲೇ ಬೇಕೆನ್ನುವ ನಿಯಮವಿಲ್ಲ.




ಬಿಳಿ ಮಚ್ಚೆಗಳೆ

ಪರಿಣಿತಿಯನ್ನು 50,000 ರೋಗಿಗಳು ಮೆಚ್ಚಿದ್ದಾರೆ.

ಹೊಸದಾಗಿ ಕಂಡುಹಿಡಿಯಲಾದ ಈ ಔಷಧಿಯನ್ನು ಉಪಯೋಗಿಸುವುದರಿಂದ ನಿಮ್ಮ ತ್ವಚೆಯ ವರ್ಣವು ಅಲ್ಪಕಾಲದಲ್ಲೇ ನೈಜವಾಗಿ ಬದಲಾಗುವುದು. ನಿಮ್ಮ ಕಾಯಿಲೆಯ ವಿವರಗಳನ್ನು ಕಳುಹಿಸಿರಿ ಅಥವಾ ದೂರವಾಣಿ ಮೂಲಕ ಮುಖ್ಯ ವೈದ್ಯಜಿಯನ್ನು ಸಂಪರ್ಕಿಸಿ.



ಲೈಂಗಿಕ ಸಮಸ್ಯೆ

ಖಂಡಿತ ಗುಣವಾಗುವುದು

ನಪುಂಸಕತೆ, ಗೊನೊರಿಯ, ಸಿಫಿಲಿಸ್, ಬಂಜೆತನ ಹಾಗೂ ಇತರೆ ಗೋಪ್ಯ ಲೈಂಗಿಕ ಸಮಸ್ಯೆಗಳನ್ನು ಆಯುರ್ವೇದಿಕ್ ಚಿಕಿತ್ಸೆ ಮೂಲಕ ಗುಣಪಡಿಸಬಹುದು. ಒಂದು ಕೋರ್ಸ್ ಔಷಧಿ ಹಾಗೂ ಉಚಿತ ಲಿಂಗವರ್ಧಕ್‌ಗೆ ನಮ್ಮನ್ನು ಸಂಪರ್ಕಿಸಲು ಸಂಕೋಚಪಡದಿರಿ.

ಸ್ತ್ರೀ ರೋಗ

ಬಿಳಿಸೆರಗು– ಬಿಳಿ ಅಥವಾ ರಕ್ತ, ಮುಟ್ಟಿನ ತೊಂದರೆ, ಬಂಜೆತನ, ರಕ್ತಹೀನತೆ ಅಶಕ್ತತೆ, ಸೊಂಟದ ನೋವು ಇತ್ಯಾದಿಗೆ ಖಾತರಿಯಾದ ಚಿಕಿತ್ಸೆಗಾಗಿ ಕೂಡಲೆ ನಮ್ಮನ್ನು ಸಂಪರ್ಕಿಸಿ.

ಆಕರ್ಷಕ ಸ್ತನಗಳಿಗೆ



ನಮ್ಮ ಯಶಸ್ವಿ ಆಯುರ್ವೇದಿಕ್ ಚಿಕಿತ್ಸೆ ಪಡೆದು ಅಲ್ಪಕಾಲದಲ್ಲೇ ನಿಮ್ಮ ಸ್ತನಗಳು ಸೂಕ್ತ ವೃದ್ಧಿ ಹೊಂದಲು ನಮ್ಮನ್ನು ಮುಕ್ತವಾಗಿ ಸಂಪರ್ಕಿಸಿರಿ.

Asia Ayurved P.O. Katri Sarai (Gaya)

Phone: 0631-2224881
09931840701 / 09334221088
09431025482 / 09835671211